# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೦, ಏಪ್ರಿಲ್, ೨೦೨೬ (ಚೈತ್ರ, ೨೦, ಶಕವರ್ಷ, ೧೯೪೮)<br>BENGALURU, FRIDAY, 10, APRIL, 2026 (CHAITHRA, 20, SHAKAVARSHA, 1948) | ನಂ. ೨೭೨<br>No. 272 |
|---|---|---|


## GOVERNMENT OF KARNATAKA

No. FD 06 PES 2025

KarnatakaGovernment Secretariat
Vidhana Soudha,
Dr. B.R. Ambedkar Veedhi,
Bengaluru, Dated: 10.04.2026.

## NOTIFICATION-I

The draft of the following Rules further to amend the Karnataka Excise (Lease of the Right of Retail Vend of Wine or Fortified Wine) Rules, 2008, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after the expiry of **Ten days** from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

**1. Title and commencement: -** (1) These Rules may be called the Karnataka Excise (Lease of the Right of Retail Vend of Wine or Fortified Wine) (Amendment) Rules, 2026.

(2) They shall come into force from the date of their final publication in the official Gazette.

**2. <u>Amendment of Rule 2:</u>-** In the Karnataka Excise (Lease of the Right of Retail Vend of Wine or Fortified Wine) Rules, 2008 (hereinafter referred to as the 'said rules'), in rule 2, in clause (8), for the word "Year" the word "Excise Year" shall be substituted.

**3. <u>Amendment of Rule 7:</u>-** In Rule 7 of said rules, for sub-rule (2), the following shall be substituted, namely:-

"(2) The licence granted under sub-rule (1) shall be subject to the conditions specified therein and shall take effect from the date specified therein. The licence shall be valid for a period of 5 (five) Excise years including the year of grant, subject to annual payment of licence fee and additional licence fee at the prevailing rates"

**4. <u>Amendment of Rule 8:</u>-** In Rule 8 of the said rules, for sub-rule (2), the following shall be substituted, namely:-

"(2) On receipt of the application under sub-rule (1), the Deputy Commissioner of Excise may renew the lease for a period of 5 (five) Excise years including the year of renewal, subject to annual payment of licence fee and additional licence fee at the prevailing rates"

**By Order and in the Name of**
**The Governor of Karnataka**
**Sd/-**
**(Bhimappa P. Ajoor)**
**Under Secretary to Government,**
**Finance Department (Excise)**

## ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 06 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10.04.2026.

## ಅಧಿಸೂಚನೆ-I

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ವೈನ್ ಅಥವಾ ಫೋರ್ಟಿಫೈಡ್ ವೈನ್ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 2008 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ **ಹತ್ತು ದಿನಗಳ** ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ** :-(1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ವೈನ್ ಅಥವಾ ಫೋರ್ಟಿಫೈಡ್ ವೈನ್ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **2 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ವೈನ್ ಅಥವಾ ಫೋರ್ಟಿಫೈಡ್ ವೈನ್ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 2008ರ 2 ನೇ ನಿಯಮದಲ್ಲಿ, ಉಪ-ನಿಯಮ (8) ರಲ್ಲಿ "ವರ್ಷ" ಎಂಬ ಪದದ ಬದಲಾಗಿ, "ಅಬಕಾರಿ ವರ್ಷ " ಎಂಬ ಪದ ಪ್ರತಿಸ್ಥಾಪಿಸತಕ್ಕದ್ದು.

**3. <u>7 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 7 ನೇ ನಿಯಮದಲ್ಲಿ, ಉಪ-ನಿಯಮ (2) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(2) ಉಪ-ನಿಯಮ (1) ರ ಅಡಿಯಲ್ಲಿ ಮಂಜೂರು ಮಾಡಲಾದ ಪರವಾನಗಿಯು ಅದರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೂ ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಪ್ರತಿ ವರ್ಷ ಪ್ರಚಲಿತ ದರಗಳಂತೆ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದ ಪಾವತಿಗೆ ಒಳಪಟ್ಟು, ಮಂಜೂರಾತಿ ನೀಡಲಾಗಿರುವ ವರ್ಷ ಸೇರಿದಂತೆ 5 (ಐದು) ಅಬಕಾರಿ ವರ್ಷಗಳ ಅವಧಿಗೆ ಸನ್ನದು ಮಾನ್ಯವಾಗಿರುತ್ತದೆ.

**4. <u>8 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 8 ನೇ ನಿಯಮದಲ್ಲಿ, ಉಪ-ನಿಯಮ (2) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(2) ಉಪ-ನಿಯಮ (1) ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಪ್ರತಿ ವರ್ಷ ಪ್ರಚಲಿತ ದರಗಳಂತೆ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದ ಪಾವತಿಗೆ ಒಳಪಟ್ಟು, ಅಬಕಾರಿ ಉಪ ಆಯುಕ್ತರು ನವೀಕರಣ ವರ್ಷವನ್ನು ಒಳಗೊಂಡಂತೆ 5 (ಐದು) ಅಬಕಾರಿ ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

## <u>GOVERNMENT OF KARNATAKA</u>

No. FD 06 PES 2025

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated: 10.04.2026.

## <u>NOTIFICATION-II</u>

The draft of the following Rules to further amend the Karnataka Excise (Manufacture of Fortified Wine from Grapes) Rules, 1968, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said

section for information of all persons likely to be affected thereby and notice is hereby given that the said draft will be taken up for consideration after the expiry of Ten **days** from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

1. **Title and commencement: -** (1) These Rules may be called the Karnataka Excise (Manufacture of Fortified Wine from Grapes) (Amendment) Rules, 2026.

(2) They shall come into force from the date of their final publication in the official Gazette.

2. **Amendment of Rule 2:-** In the Karnataka Excise (Manufacture of Fortified Wine from Grapes) Rules, 1968, (hereinafter referred to as the said rules),in rule 2, after clause (1), the following clause shall be inserted, namely:-

(1-A) "Excise Year" means the year commencing on the first day of July and ending with the 30th day of June of the next calendar year".

**3.Amendment of Rule 8:-** "In rule 8 of the said rules, in rule 8, the following shall be substituted, namely:-

"(1) The licence shall be granted in Form M.W.G.2 and shall be subject to the conditions specified therein and shall take effect from the date specified therein. The licence shall be valid for a period of 5 (five) Excise years including the year of grant, subject to annual payment of licence fee and additional licence fee at the prevailing rates.

**By Order and in the Name of**

**The Governor of Karnataka**

**Sd/-**

**(Bhimappa P. Ajoor)**

**Under Secretary to Government,**
**Finance Department (Excise)**

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 06 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10.04.2026.

**ಅಧಿಸೂಚನೆ-II**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಫೋರ್ಟಿಫೈಡ್ ವೈನ್ ತಯಾರಿಕೆ) ನಿಯಮಗಳು, 1968 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹತ್ತು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಫೋರ್ಟಿಫೈಡ್ ವೈನ್ ತಯಾರಿಕೆ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **2 ನೇ ನಿಯಮದ ತಿದ್ದುಪಡಿ:** , ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಫೋರ್ಟಿಫೈಡ್ ವೈನ್ ತಯಾರಿಕೆ)ನಿಯಮಗಳು, 1968 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), 2 ನೇ ನಿಯಮದಲ್ಲಿ, ಉಪ-ನಿಯಮ (1) ರ ನಂತರ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

(1-A) "ಅಬಕಾರಿ ವರ್ಷ" ಎಂದರೆ ಜುಲೈ ಮೊದಲ ದಿನದಿಂದ ಪ್ರಾರಂಭವಾಗಿ ಮುಂದಿನ ಕ್ಯಾಲೆಂಡರ್ ವರ್ಷದ ಜೂನ್ 30ನೇ ದಿನದೊಂದಿಗೆ ಕೊನೆಗೊಳ್ಳುವ ವರ್ಷ".

3.**8 ನೇ ನಿಯಮದ ತಿದ್ದುಪಡಿ**:- ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಫೋರ್ಟಿಫೈಡ್ ವೈನ್ ತಯಾರಿಕೆ) ನಿಯಮಗಳು, 1968 ರ 8 ನೇ ನಿಯಮದಲ್ಲಿ, ಉಪ-ನಿಯಮ (1) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(1) ಸನ್ನದನ್ನು **ನಮೂನೆ** ಎಂ.ಡಬ್ಲ್ಯೂ.ಜಿ.2 ನಲ್ಲಿ ಮಂಜೂರು ಮಾಡಲಾಗುವುದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೂ ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಪ್ರತಿ ವರ್ಷ ಪ್ರಚಲಿತ ದರಗಳಂತೆ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದ ಪಾವತಿಗೆ ಒಳಪಟ್ಟು, ಮಂಜೂರಾತಿ ನೀಡಲಾಗಿರುವ ವರ್ಷ ಸೇರಿದಂತೆ 5 (ಐದು) ಅಬಕಾರಿ ವರ್ಷಗಳ ಅವಧಿಗೆ ಸನ್ನದು ಮಾನ್ಯವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

**GOVERNMENT OF KARNATAKA**

No. FD 06 PES 2025

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated:10.04.2026.

**NOTIFICATION-III**

The draft of the following Rules further to amend the Karnataka Excise (Manufacture of Wine) Rules, 2008, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after the expiry of Ten days from the date of its publication in the official Gazette.

Any objections or suggestions which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

**01. Title and commencement: -** (1) These Rules may be called the Karnataka Excise (Manufacture of Wine) (Amendment) Rules, 2026.

(2) They shall come into force from the date of their final publication in the official Gazette.

02. **Amendment of Rule 2:-** In the Karnataka Excise (Manufacture of Wine) Rules, 2008, (hereinafter referred to as the said rules), in rule 2, after clause (2), the following clause shall be inserted, namely:-

(2-A) "Excise Year" means the year commencing on the first day of July and ending with the 30th day of June of the next calendar year".

03. **Amendment of Rule 5:-** "In rule 5 of the said rules, for sub-rule (1), the following shall be substituted, namely:-

"(1) The licence shall be granted in Form F.W.2 and shall be subject to the conditions specified therein and shall take effect from the date specified therein. The licence shall be valid for a period of 5 (five) Excise years including the year of grant, subject to annual payment of licence fee and additional licence fee at the prevailing rates"

**By Order and in the Name of**

**The Governor of Karnataka**

**Sd/-**

**(Bhimappa P. Ajoor)**

**Under Secretary to Government,**

**Finance Department (Excise)**

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 06 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10.04.2026.

**ಅಧಿಸೂಚನೆ-III**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ವೈನ್ ತಯಾರಿಕೆ) ನಿಯಮಗಳು, 2008 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹತ್ತು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ವೈನ್ ತಯಾರಿಕೆ)ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **2 ನೇ ನಿಯಮದ ತಿದ್ದುಪಡಿ:** ಕರ್ನಾಟಕ ಅಬಕಾರಿ (ವೈನ್ ತಯಾರಿಕೆ) ನಿಯಮಗಳು, 2008 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), 2 ನೇ ನಿಯಮದಲ್ಲಿ, ಉಪ-ನಿಯಮ (2) ರ ನಂತರ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



"(2-A) "ಅಬಕಾರಿ ವರ್ಷ" ಎಂದರೆ ಜುಲೈ ಮೊದಲ ದಿನದಿಂದ ಪ್ರಾರಂಭವಾಗಿ ಮುಂದಿನ ಕ್ಯಾಲೆಂಡರ್ ವರ್ಷದ ಜೂನ್ 30 ನೇ ದಿನದೊಂದಿಗೆ ಕೊನೆಗೊಳ್ಳುವ ವರ್ಷ".3.**<u>5 ನೇ ನಿಯಮದ ತಿದ್ದುಪಡಿ</u>**: ಕರ್ನಾಟಕ ಅಬಕಾರಿ (ವೈನ್ ತಯಾರಿಕೆ) ನಿಯಮಗಳು, 2008 ರ 5 ನೇ ನಿಯಮದಲ್ಲಿ, ಉಪ-ನಿಯಮ (1) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"**(1) ಸನ್ನದನ್ನು **ನಮೂನೆ** ಎಫ್.ಡಬ್ಲ್ಯೂ.2 ನಲ್ಲಿ ಮಂಜೂರು ಮಾಡಲಾಗುವುದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೂ ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಪ್ರತಿ ವರ್ಷ ಪ್ರಚಲಿತ ದರಗಳಂತೆ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದ ಪಾವತಿಗೆ ಒಳಪಟ್ಟು, ಮಂಜೂರಾತಿ ನೀಡಲಾಗಿರುವ ವರ್ಷ ಸೇರಿದಂತೆ 5 (ಐದು) ಅಬಕಾರಿ ವರ್ಷಗಳ ಅವಧಿಗೆ ಸನ್ನದು ಮಾನ್ಯವಾಗಿರುತ್ತದೆ.

**3**. **<u>5 ನೇ ನಿಯಮದ ತಿದ್ದುಪಡಿ</u>**:– ಕರ್ನಾಟಕ ಅಬಕಾರಿ (ವೈನ್ ತಯಾರಿಕೆ) ನಿಯಮಗಳು, 2008 ರ 5 ನೇ ನಿಯಮದಲ್ಲಿ, ಉಪ-ನಿಯಮ (1) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH